# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂ. | 1070 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 14.12.2023 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಒಟ್ಟು ಹೊಂದಿರುವ ಸಿ.ಎಲ್-7 ಸನ್ನದುಗಳ ಸಂಖ್ಯೆ ಎಷ್ಟು; ಸಿ.ಎಲ್-7 ಸನ್ನದುಗಳನ್ನು ತೆರೆಯಲು ಇಲಾಖಾ ಮಾರ್ಗಸೂಚಿ ಹಾಗೂ ಮಂಜೂರಾತಿಗೆ ಬೇಕಾದ ದಾಖಲೆಗಳೇನು; (ಸನ್ನದುದಾರರ ಹೆಸರಿನೊಂದಿಗೆ ಸಂಪೂರ್ಣ ವಿವರ ನೀಡುವುದು) | ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಒಟ್ಟು 37 ಸಿ.ಎಲ್-7 ಸನ್ನದುಗಳು ಕಾರ್ಯನಿರ್ವಹಿಸುತ್ತಿವೆ.<br><br>ಸಿಎಲ್-7 ಸನ್ನದನ್ನು ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 3(7) ಮತ್ತು 5ರಡಿ ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರಡಿ ಇರುವ ನಿಬಂಧನೆಗಳನ್ನು ಪಾಲಿಸಿ ಹೊಸದಾಗಿ ಮಂಜೂರು ಮಾಡಲಾಗುತ್ತಿದೆ. ಸಿಎಲ್-7 ಸನ್ನದುಗಳ ಲಾಡ್ಜ್‌ನಲ್ಲಿ ತಂಗುವ ಗ್ರಾಹಕರಿಗೆ ಹಾಗೂ ಅವರ ಅಥಿತಿಗಳಿಗೆ ಹಾಗೂ ರೆಸ್ಟೋರೆಂಟ್‌ಗೆ ಬರುವ ಸಾಂದರ್ಭಿಕ ಸಂದರ್ಶಕರುಗಳಿಗೆ ಊಟದೊಂದಿಗೆ ಮದ್ಯವನ್ನು ಸೇವಿಸುವವರಿಗೆ ಮದ್ಯ ಮಾರಾಟ ಮಾಡಲು ಅವಕಾಶವಿರುತ್ತದೆ.<br><br>ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮ 8 ಮತ್ತು 8(ಎ) ರಲ್ಲಿ ನಿಗಧಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕ ಪಾವತಿಸಿಕೊಳ್ಳಲಾಗುತ್ತಿದೆ. ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಕಾಲೋನಿಗಳು ಇರುವಂತಿಲ್ಲ. ಸ್ಥಳೀಯ ಸಂಸ್ಥೆಗಳು ಹಾಗೂ ಪತ್ರಾಂಕಿತ ಅಧಿಕಾರಿಗಳ |

| | | |
|---|---|---|
| | | ಕೇಂದ್ರ/ರಾಜ್ಯ ಸರ್ಕಾರಿ ಕಛೇರಿಗಳು ಇರುವಂತಿಲ್ಲ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:12164–12166/2016ರ ದಿನಾಂಕ:31.03.2017ರಲ್ಲಿ ಆದೇಶಿಸಿದಂತೆ 20,000ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ (ಸಿವಿಲ್) ಸಂಖ್ಯೆ:10243/2017 ದಿನಾಂಕ:11.07.2017ರ ಆದೇಶದಲ್ಲಿ ನೀಡಿದ ಸ್ಪಷ್ಟೀಕರಣದಂತೆ, ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಲ್ಲಿ ಹಾದು ಹೋಗುವ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳಲ್ಲಿರುವ ಸನ್ನದುಗಳನ್ನು ನಿಯಮಾನುಸಾರ ನವೀಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಸರ್ಕಾರದ ಪತ್ರ ಸಂಖ್ಯೆ:ಆಇ 36 ಇಡಬ್ಲ್ಯೂಪಿ 2018, ದಿನಾಂಕ:06.08.2020ರಲ್ಲಿ 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯತಿ / ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್–6ಎ ಮತ್ತು ಸಿಎಲ್–7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ |

ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ವಿನಾಯಿತಿಯನ್ನು ನೀಡಲಾಗಿದೆ.

ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ:ಆಇ 33 ಇಎಫ್‌ಎಲ್ 2021, ದಿನಾಂಕ:19.01.2022ರಲ್ಲಿ ಸರ್ಕಾರದ ರಾಜಸ್ವ ಹಿತದೃಷ್ಟಿಯಿಂದ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಹೊಸದಾಗಿ ಮಂಜೂರು ಮಾಡುವ ಸಿಎಲ್ 7(ಎ) ಸನ್ನದುಗಳಿಗೂ ವಿಸ್ತರಿಸಿ ಅನುಮತಿಯನ್ನು ನೀಡಲಾಗಿದೆ.

ಸಿಎಲ್–7 ಮಂಜೂರು ಮಾಡಲು ಬೃಹತ್ / ಮಹಾನಗರ ಪಾಲಿಕೆಗಳಲ್ಲಿ 15 ಡಬಲ್ ರೂಂ ಹಾಗೂ ಇತರೆ ಪ್ರದೇಶದಲ್ಲಿ 10 ಡಬಲ್ ರೂಂ ಅನ್ನು ಕಟ್ಟಡದಲ್ಲಿ ಹೊಂದಿರಬೇಕು.

ಸರ್ಕಾರದ ಪತ್ರ ಸಂಖ್ಯೆ:ಆಇ 11 ಪಿಇಎಸ್ 2022, ದಿನಾಂಕ: 13.01.2023ರನ್ವಯ ಅಬಕಾರಿ ಸನ್ನದು ಮಂಜೂರಾತಿ/ ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ/ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಅಥವಾ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗುತ್ತಿದೆ.

ಈ ಮೂಲ ಸೌಕರ್ಯಗಳ ಪೈಕಿ ಸಿಎಲ್ 7 ಸನ್ನದಿನ ಕಟ್ಟಡದಲ್ಲಿನ ಎರಡು ಹಾಸಿಗೆಗಳಿರುವ (Double Bedded) ಮತ್ತು ಶೌಚಾಲಯದ ವ್ಯವಸ್ಥೆಯಿರುವ ಕೊಠಡಿಗಳ ಬಗ್ಗೆ ಹಾಗೂ ಸನ್ನದಿನ ಆವರಣದಲ್ಲಿ ವಾಹನಗಳ ನಿಲುಗಡೆಗಾಗಿ ಪಾರ್ಕಿಂಗ್ ಸೌಲಭ್ಯವನ್ನು ಕಲ್ಪಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಲಾಗುತ್ತಿದೆ.

ಅರ್ಜಿದಾರರು ಹೊಸದಾಗಿ ಸಿಎಲ್–7 ಸನ್ನದು ಪಡೆಯಲು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸುತ್ತಾರೆ.

1. ಕರ್ನಾಟಕ ಅಬಕಾರಿ (ದೇಶಿ & ವಿದೇಶಿ ಮದ್ಯ ಮಾರಾಟ) ನಿಯಮಗಳು 1968ರ ನಿಯಮ 4 ರಡಿಯಲ್ಲಿ ನಿಗಧಿತ ನಮೂನೆ ಸಿಎಲ್–1ಎ ರಲ್ಲಿ ಅರ್ಜಿ.
2. ಪ್ರದೇಶಕ್ಕನುಗುಣವಾಗಿ ನಿಗದಿತ ಸನ್ನದು ಶುಲ್ಕ ಮತ್ತು

| | | |
|---|---|---|
| | | ಹೆಚ್ಚುವರಿ ಸನ್ನದು ಶುಲ್ಕ ಸರ್ಕಾರಕ್ಕೆ ಪಾವತಿಸಿರುವ ಮೂಲ ಚಲನ್ / KTC-25 ದೃಢೀಕೃತ ಪ್ರತಿ.<br>3. ಅರ್ಜಿದಾರರ ವಿಳಾಸದ ಪುರಾವೆಗಾಗಿ ಆಧಾರ್ ಕಾರ್ಡ್ ಮತ್ತು ಪಾನ್‌ಕಾರ್ಡ್‌ನ ದೃಢೀಕೃತ ಪ್ರತಿ.<br>4. ಅರ್ಜಿದಾರರ ಭಾವಚಿತ್ರ ಮತ್ತು ಮಾದರಿ ಸಹಿಗಳ ದೃಢೀಕೃತ ಪ್ರತಿ.<br>5. ಉದ್ದೇಶಿತ ಕಟ್ಟಡಕ್ಕೆ ಸಂಬಂಧಿಸಿದಂತೆ ಪೂರಕವಾದ ದಾಖಲೆಗಳು ಖಾತಾ / ಆಸ್ತಿ ತೆರಿಗೆ ಪಾವತಿಸಿರುವ ರಸೀದಿ/ ನಮೂನೆ 3, 9 & 11, ನೊಂದಾಯಿತ ಶುದ್ಧ ಕ್ರಯ ಪತ್ರ / ಲೀಸ್ ಪತ್ರ ಇತ್ಯಾದಿ.<br>6. ಪಾಲುದಾರಿಕೆ ಸಂಸ್ಥೆಯಾಗಿದ್ದಲ್ಲಿ ವ್ಯಾಪಾರ ಸಂಸ್ಥೆ ಇಲಾಖೆಯಲ್ಲಿ ನೋಂದಣಿಯಾಗಿರುವ ದಾಖಲೆ, ಪಾಲುದಾರಿಕೆ ಪಾನ್ ಕಾರ್ಡ್, ಪಾಲುದಾರಿಕೆ ಒಡಂಬಡಿಕೆ ಪತ್ರ.<br>7. ಗ್ರಾಮ ಪಂಚಾಯಿತಿ ಅಧಿಕಾರಿಗಳು ನೀಡಿರುವ ಜನರಲ್ ಲೈಸೆನ್ಸ್ / ಉದ್ದಿಮೆ ಪರವಾನಗಿ.<br>8. ಸಕ್ಷಮ ಪ್ರಾಧಿಕಾರಿಗಳು ಉದ್ದೇಶಿತ ಕಟ್ಟಡದಲ್ಲಿ ರೆಸ್ಟೋರೆಂಟ್, ಬೋರ್ಡಿಂಗ್ ಮತ್ತು ಲಾಡ್ಜಿಂಗ್ ನಡೆಸಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ನೀಡಿರುವ ನಿರಾಕ್ಷೇಪಣಾ ಪತ್ರ.<br>9. ತಹಶೀಲ್ದಾರ್‌ರವರಿಂದ 2011ರ ಜನಗಣತಿ ಪ್ರಕಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜನಸಂಖ್ಯೆ ಇರುವ ಬಗ್ಗೆ ನೀಡಿರುವ ದೃಢೀಕರಣ ಪತ್ರ<br>10. ಅರ್ಜಿದಾರರ ಹೆಸರಿನಲ್ಲಿ ಎಫ್.ಎಸ್.ಎಸ್.ಎ.ಐ ಕಾಯ್ದೆ 2006 ರಡಿಯಲ್ಲಿ ನೋಂದಣಿಯಾಗಿರುವ ದಾಖಲೆ.<br>11. ಅರ್ಜಿದಾರರ ಹೆಸರಿನಲ್ಲಿ ನೋಂದಣಿಯಾಗಿರುವ ಫಾರಂ ಜಿ.ಎಸ್.ಟಿ ಆರ್.ಇ.ಜಿ–06 ನೋಂದಣಿ ಪ್ರಮಾಣ ಪತ್ರ.<br>12. ಉದ್ದೇಶಿತ ಕಟ್ಟಡಕ್ಕೆ ಅಗ್ನಿಶಾಮಕ ಉಪಕರಣವನ್ನು ಅಳವಡಿಸಿರುವ ಬಗ್ಗೆ ಪ್ರಮಾಣ ಪತ್ರ.<br>13. ಅರ್ಜಿದಾರರು ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968ರ ನಿಯಮ 4(ಬಿ) ರಂತೆ ಅನರ್ಹತೆ ಹೊಂದಿಲ್ಲವೆಂಬುದಾಗಿ ಪ್ರಮಾಣ ಪತ್ರ. |

| | | |
|---|---|---|
| | | 14. ಉದ್ದೇಶಿತ ಕಟ್ಟಡದ ಕಾಮಗಾರಿ ಸಂಪೂರ್ಣಗೊಂಡಿರುವ ಬಗ್ಗೆ ಸಿವಿಲ್ ಇಂಜಿನಿಯರ್ ರವರಿಂದ ಪಡೆದಿರುವ ದಾಖಲೆ.<br>15. ಉದ್ದೇಶಿತ ಮಳಿಗೆಯ ನೀಲಿ ನಕಾಶೆ ಮತ್ತು 100 ಮೀಟರ್ ಸುತ್ತಳತೆಯ ನಕಾಶೆ ತ್ರಿಪ್ರತಿಗಳಲ್ಲಿ.<br>16. ಕಟ್ಟಡದ ದೃಢೀಕೃತ ಛಾಯಾ ಚಿತ್ರಗಳು<br>17. ರಾಷ್ಟ್ರೀಯ / ರಾಜ್ಯ ಹೆದ್ದಾರಿಯ ಯಾವುದೇ ಕಾಯ್ದೆ / ನಿಯಮಗಳು ಉಲ್ಲಂಘನೆಯಾಗದಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ.<br>ಪ್ರತಿ ಸನ್ನದುದಾರರ ಮಾಹಿತಿಯನ್ನು **ಅನುಬಂಧದಲ್ಲಿ** ಇರಿಸಿದೆ. |
| ಆ | ಹಾಗಿದ್ದಲ್ಲಿ, ಚನ್ನರಾಯಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಅಬಕಾರಿ ಇಲಾಖೆಯಿಂದ ಕಾನೂನು ಬಾಹಿರವಾಗಿ/ನಿಯಮ ಮೀರಿ / ಮಂಜೂರಾತಿಗಿಂತ ಕಡಿಮೆ ವಿಸ್ತೀರ್ಣದ ಕಟ್ಟಡ ಮತ್ತು ತಪ್ಪು ದಾಖಲೆಗಳ ಆಧಾರದ ಮೇಲೆ ಸಿ.ಎಲ್–7 ಸನ್ನದುಗಳಿಗೆ ಮಂಜೂರಾತಿ ನೀಡಿರುವ ಬಗ್ಗೆ ಸಾರ್ವಜನಿಕರಿಂದ ದೂರು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ನಿಯಮ ಉಲ್ಲಂಘನೆ ಮಾಡಿ ಮಂಜೂರಾತಿ ನೀಡಿರುವ ಅಧಿಕಾರಿಗಳ ಮೇಲೆ ಮತ್ತು ಅಂತಹ ಘಟಕಗಳ ಮೇಲೆ ಕ್ರಮ ಜರುಗಿಸಲಾಗಿದೆಯೇ; (ವಿವರ ನೀಡುವುದು) | ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಅಬಕಾರಿ ಇಲಾಖೆಯಿಂದ ಕಾನೂನು ಬಾಹಿರವಾಗಿ/ನಿಯಮ ಮೀರಿ ಮಂಜೂರಾತಿಗಿಂತ ಕಡಿಮೆ ವಿಸ್ತೀರ್ಣದ ಕಟ್ಟಡ ಮತ್ತು ತಪ್ಪು ದಾಖಲೆಗಳ ಆಧಾರದ ಮೇಲೆ ಸಿಎಲ್–7 ಸನ್ನದುಗಳಿಗೆ ಮಂಜೂರಾತಿ ನೀಡಿರುವ ಬಗ್ಗೆ ಸಾರ್ವಜನಿಕರಿಂದ 02 ದೂರುಗಳು ಸ್ವೀಕೃತವಾಗಿದ್ದು, ವಿವರ ಕೆಳಕಂಡಂತಿದೆ.<br>1. ಶ್ರೀಮತಿ ಸುಶೀಲಮ್ಮ ಎಲ್.ಎಂ., ಸಿಎಲ್–7 ಸನ್ನದುದಾರರು, ಬಳದರೆ ಗೇಟ್, ದಂಡಿಗನಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು ಇವರ ಮೇಲಿನ ದೂರು ಅರ್ಜಿಯ ಬಗ್ಗೆ ಅಬಕಾರಿ ನಿರೀಕ್ಷಕರು, ಚನ್ನರಾಯಪಟ್ಟಣ ವಲಯ ಹಾಗೂ ಅಬಕಾರಿ ಉಪ ಅಧೀಕ್ಷಕರು, ಹಾಸನ ಉಪ ವಿಭಾಗ ಇವರುಗಳು ಸದರಿ ಸಿಎಲ್–7 ಸನ್ನದು ನಿಯಮಾನುಸಾರವಿರುವುದೆಂದು ಪರಿಶೀಲನಾ ವರದಿಯಲ್ಲಿ ವರದಿಸಿರುವಂತೆ ಸದರಿ ದೂರು ಅರ್ಜಿಯನ್ನು ವಿಲೇಗೊಳಿಸಲಾಗಿರುತ್ತದೆ.<br>2. ಶ್ರೀ ಜಿ.ದೇವರಾಜೇಗೌಡ, ವಕೀಲರು, ಹಾಸನ ಇವರು ನೀಡಿರುವ ದೂರು ಅರ್ಜಿಯಲ್ಲಿ ಚನ್ನರಾಯಪಟ್ಟಣ ವಲಯ ವ್ಯಾಪ್ತಿಯಲ್ಲಿ ಶ್ರೀ ಜೆ.ದೀಪಕ್‌ಗೌಡ ಮತ್ತು ಅವರ ತಾಯಿಯಾದ ಶ್ರೀಮತಿ ಎಲ್.ಎಂ.ಸುಶೀಲಮ್ಮ ಇವರು ಕಾನೂನು ಬಾಹಿರವಾಗಿ ಮತ್ತು ನಿಯಮಗಳನ್ನು ಉಲ್ಲಂಘಿಸಿ ಸಿಎಲ್–7 ಸನ್ನದುಗಳನ್ನು ಹೊಂದಿರುತ್ತಾರೆಂದು |

| | | |
|---|---|---|
| | | ಆರೋಪಿಸಿದ್ದು, ಸದರಿ ದೂರು ಅರ್ಜಿಯ ಬಗ್ಗೆ ಕೂಲಂಕಶವಾಗಿ ಪರಿಶೀಲಿಸಲು ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಮೈಸೂರು ವಿಭಾಗ, ಮೈಸೂರು ಇವರು ಸಮಿತಿಯನ್ನು ರಚಿಸಿರುತ್ತಾರೆ. ಸದರಿ ಸಮಿತಿಯವರು ದೂರು ಅರ್ಜಿಯ ಬಗ್ಗೆ ಪರಿಶೀಲನೆ ನಡೆಸಿ, ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಮೈಸೂರು ವಿಭಾಗ, ಮೈಸೂರು ಇವರಿಗೆ ವರದಿಯನ್ನು ಸಲ್ಲಿಸಿದ್ದು, ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಮೈಸೂರು ವಿಭಾಗ, ಮೈಸೂರು ರವರ ಕಛೇರಿಯಲ್ಲಿ ಪರಿಶೀಲನಾ ಹಂತದಲ್ಲಿದೆ. |
| ಇ | ರಾಜ್ಯ ಅಬಕಾರಿ ಇಲಾಖೆಯ ಮಾರ್ಗಸೂಚಿಗಳ ಮೇಲೆ ಒಬ್ಬ ಸಾರ್ವಜನಿಕರ ಹೆಸರಿನಲ್ಲಿ ಒಟ್ಟು ಎಷ್ಟು ಸಿ.ಎಲ್–7 ಸನ್ನದುಗಳ ಲೈಸನ್ಸ್ ಹೊಂದಬಹುದು; ಒಂದಕ್ಕಿಂತ ಹೆಚ್ಚು ಲೈಸನ್ಸ್ ಹೊಂದಲು ಅಥವಾ ಇಲಾಖೆಯಿಂದ ಮಂಜೂರಾತಿ ನೀಡಲು ಬೇರೆ ಯಾವುದೇ ಇಲಾಖೆಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ ಹೊಂದಬೇಕಾದ ಅವಶ್ಯಕತೆ ಇದೆಯೇ; ಹಾಗಿದ್ದಲ್ಲಿ, ಒಂದಕ್ಕಿಂತ ಹೆಚ್ಚು ಸಿ.ಎಲ್–7 ಸನ್ನದು ಹೊಂದಲು ವ್ಯಕ್ತಿಯ ಮೂಲ ಆದಾಯವನ್ನು ಪ್ರಶ್ನಿಸುವ ಅಧಿಕಾರ ಸಂಬಂಧಪಟ್ಟ ಇಲಾಖೆಗೆ ಒಳಪಡುವುದಿಲ್ಲವೇ; (ಸಂಪೂರ್ಣ ವಿವರ ನೀಡುವುದು) | ಒಬ್ಬ ಸಾರ್ವಜನಿಕನಿಗೆ ಒಂದಕ್ಕಿಂತ ಹೆಚ್ಚು ಸಿಎಲ್–7 ಸನ್ನದು ಹೊಂದಲು ಹಾಗೂ ಬೇರೆ ಇನ್ನಿತರೆ ಯಾವುದೇ ಇಲಾಖೆಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆಯಲು ಅಬಕಾರಿ ಕಾಯ್ದೆ ಮತ್ತು ನಿಯಮಗಳ ಮಾರ್ಗಸೂಚಿಯಲ್ಲಿ ಯಾವುದೇ ನಿರ್ಬಂಧವಿರುವುದಿಲ್ಲ.<br><br>ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968ರ ನಿಯಮ 4(ಬಿ)ರ ಪ್ರಕಾರ ಅನರ್ಹತೆಯನ್ನು ಹೊರತುಪಡಿಸಿ, ವ್ಯಕ್ತಿಗಳಿಗೆ ಸನ್ನದು ಮಂಜೂರಾತಿ ನೀಡಲು ಬೇರೆ ಯಾವುದೇ ನಿರ್ದಿಷ್ಟ ನಿಯಮ ಮತ್ತು ನಿರ್ದೇಶನಗಳು ಇರುವುದಿಲ್ಲ. |
| ಈ | ಹಾಗಿದ್ದಲ್ಲಿ, ಹಾಸನ ಜಿಲ್ಲಾ ಅಬಕಾರಿ ಇಲಾಖೆಯ ಜ್ಞಾಪನ ಪತ್ರದ | ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಮೈಸೂರು ವಿಭಾಗ, ಮೈಸೂರು ರವರ ಜ್ಞಾಪನ ಪತ್ರ ಸಂ:ಜೆಸಿಎಂ/11/ |

| | | |
|---|---|---|
| | ಸಂಖ್ಯೆ:ಜೆಸಿಎಂ/11/ದೂರು/2023-24 ದಿನಾಂಕ:06.11.2023ರಲ್ಲಿ ಒಬ್ಬ ವ್ಯಕ್ತಿಯ ಹೆಸರಿಗೆ ಒಂದಕ್ಕಿಂತ ಹೆಚ್ಚು ಸಿ.ಎಲ್-7 ಸನ್ನದು ಹೊಂದಿರುವುದು ನಮೂದಾಗಿದ್ದು, ಈ ಮಂಜೂರಾತಿ ಕ್ರಮಬದ್ಧವಾಗಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಪರಿಶೀಲಿಸಿ ಕಾಲಮಿತಿಯೊಳಗೆ ವರದಿಯನ್ನು ಸಲ್ಲಿಸಲು ಸೂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಸಂಪೂರ್ಣ ವಿವರ ನೀಡುವುದು) | ದೂರು/2023-24 ದಿ:06.11.2023ರ ಪತ್ರದಂತೆ ಸದರಿ ದೂರು ಅರ್ಜಿಯ ಬಗ್ಗೆ ಕೂಲಂಕಶವಾಗಿ ಪರಿಶೀಲಿಸಲು ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯವರು ದೂರು ಅರ್ಜಿಯ ಬಗ್ಗೆ ಪರಿಶೀಲನೆ ನಡೆಸಿ, ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯು ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಮೈಸೂರು ವಿಭಾಗ, ಮೈಸೂರು ರವರ ಕಛೇರಿಯಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. |

**ಆಇ 86 ಇಎಲ್‌ಕ್ಯೂ 2023**

(ಆರ್.ಬಿ. ತಿಮ್ಮಾಪುರ)

ಅಬಕಾರಿ ಸಚಿವರು

# KARNATAKA LEGISLATIVE COUNCIL

| | |
|---|---|
| Starred Question No: | 1070 |
| Name of the Hon'ble Member | Sri Suraj Revanna<br>(Local Authorities Constituency) |
| To be replied by | Excise Minister |
| Date of reply | 14.12.2023 |

| Sl No | QUESTION | ANSWER |
|---|---|---|
| A | What is the total number of CL-7 licences in Channarayapatna Taluk of Hassan District? What are the departmental guidelines and documents required for sanctioning of CL-7 licences? (complete details with names of licensees to be furnished) | The total number of CL-7 licences functioning in Channarayapatna Taluk of Hassan District is 37.<br><br>New CL-7 Licence are sanctioned in accordance with Rule 3(7) and 5 of the Karnataka Excise (Sale of Indian and Foreign Liquor) Rules, 1968 and restrictions specified under Rule 5 of the Karnataka Excise (General Conditions of Licences) Rules, 1967. In CL-7 licence, there is provision for sale of liquor to those accommodated in the licenced hotel and boarding houses and to their guests and casual visitors who take meals in such places.<br><br>The applicant shall remit the licence fees and additional licence fees as prescribed in Rule 8, 8-A of the Karnataka Excise (Sale of Indian and Foreign Liquor) Rules, 1968. The proposed premises should be in an unobjectionable place as specified in Rule 5 of the Karnataka Excise (General Conditions of Licences) Rules, 1967 and there shall be no Religious Institutions or Educational Institutions or Hospitals (30 Bedded) or any office of the Central and State Governments headed by a Group 'A' or 'B' Grade Officers or in a residential locality where the inhabitants are predominantly belonging to Scheduled Castes or Scheduled Tribes located within a distance of 100 mtrs. from the proposed building.<br><br>As per the order of the Hon'ble Supreme Court of India in Civil Appeal No:12164-12166/2016, dated:31.0.-2017, no licence shall be granted, within the limits of a Gram Panchayat having a population of more than 20,000 within 500 meters from the edge of service road, if service road passes through or from the edge of State/National |

| | | |
|---|---|---|
| | | Highway, and no licence shall be granted within limits of a Gram Panchayat having a population of less than 20,000 within 220 meters from the edge of the service road if the service road passes through or from the edge of a State/National Highway.<br><br>As per the clarification given by the Hon'ble Supreme Court in SPL (Civil) No. 10243 of 2017 dated:11.07.2017, licences situated along State and National Highways passing through City Municipal Corporation, City Municipal Council, Town Municipal Council and Town Panchayat areas are being allowed to renew as per rules.<br><br>The Government vide letter No:FD 36 EWP 2018, dated:06.08.2020 has given exemption only for grant of new CL-6A and CL-7 licences on both National and State Highways passing within Gram Panchayat/Local areas with population of 5000 or more as per 2011 census. This exemption is subject to compliance with all other conditions laid down under Rule 5 of the Karnataka Excise (General Conditions of Licences) Rules, 1967 except those prescribed in respect of State and National Highways.<br><br>Further, in the interest of Government revenue and to boost tourism, the above exemption has also been extended to CL-7A licences vide Government letter No:FD 33 EFL 2021, dated: 19.01.2022.<br><br>For grant of CL-7 licence, the building should have a minimum of 15 double rooms in Corporation areas and 10 double rooms in other areas.<br><br>As per the directions of the Government vide letter No.FD 11 PES 2022, dated:13.01.2023, while sanctioning or shifting licences, if the proposed building is within the limits of Grama Tana / Grama Panchayat and Urban Local Authorities, on payment of prescribed property Tax for commercial purpose, on obtaining Trade Licence or No Objection Certificate issued by the Competent Authorities, the Government has fixed the norms for grant of licence / shifting of licence to such proposed places.<br><br>It is being ensured that all basic amenities required for CL-7 licence like double-bedded rooms and rooms with toilet facilities are available and parking facility is being provided for parking of |

| | | |
|---|---|---|
| | | Foreign Liquor) Rules, 1968.<br>14. Building Completion Certificate from Civil Engineer.<br>15. Blue Print of the building and Blue Print of 100 meter radius from licensed premises, approved & certified by the competent authorities.<br>16. Attested copies of the Photographs of the Building.<br>17. No Objection Certificate issued by the competent authorities regarding non violation of any of the Act & Rules of the State / National Highways.<br><br>Information of each licensee is enclosed in **Annexure**. |
| B | If so, has it come to the notice of the Government that public have filed complaints against sanction of CL-7 licences illegally/in violation of rules/building have less area than approved plan and on the basis of wrong documents in Channarayapatna Taluk of Hassan District; If so, whether action has been taken against the Officials who sanctioned licences in violation of rules and such licences; (details to be furnished) | 02 complaints have been received from the public against sanction of CL-7 licences illegally/in violation of rules/ building having less area than approved plan and on the basis of wrong documents in Channarayapatna Taluk of Hassan District are as below.<br>1. The complaint received against Smt. Sushilamma L.M, CL-7 licensee, Baladare Gate, Dandiganahalli, Channarayapatna Taluk has been disposed off, in view of the verification report submitted by the Inspector of Excise, Channarayapatna Range and the Deputy Superintendent of Excise, Hassan Sub Division, that the CL-7 licence is in accordance with rules.<br>2. Sri. G.Devarajegowda, Advocate, Hassan has filed a complaint against Sri. J. Deepak Gowda and his mother Smt. L.M Sushilamma alleging that, they are holding a CL-7 licence illegally and in violation of rules. The Joint Commissioner of Excise (Enforcement and Inspection), Mysuru Division, Mysuru has constituted a Committee to examine the said complaint application in detail. The said Committee has verified the complaint application and submitted a report to the Joint Commissioner of Excise (Enforcement and Inspection), Mysuru Division, Mysuru and the same is under examination in the office of the Joint Commissioner of Excise (Enforcement and |

| | | |
|---|---|---|
| | | vehicles in the CL-7 licenced premises.<br><br>Documents that an applicant has to submit for obtaining a CL-7 licence are listed below.<br><br>1. Application in Form CL-1A as per Rule 4 of the Karnataka Excise (Sale of Indian and Foreign Liquors) Rules, 1968<br><br>2. Challan / KTC-25 certified copies - Licence Fees and Additional Licence Fees duly remitted to the Government as per the location<br><br>3. Certified copies of address and ID proof i.e. Aadhaar / PAN Card.<br><br>4. Attested copies of Photo and specimen signatures of the Applicant<br><br>5. Documents pertaining to the property i.e. Khata Extract, Latest Tax paid receipt, Form No.3, 9 & 11, Registered Absolute Deed / Lease Deed, etc.<br><br>6. Certificate of Registration issued by the District Registrar, Partnership Deed, PAN card of the firm, only if it's a Partnership Firm<br><br>7. Trade Licence / General Licence issued by the competent authorities<br><br>8. No Objection Certificate issued by the competent authorities for running Restaurant, Boarding and Lodging in the building<br><br>9. Population Certificate of the concerned Grama Panchayat issued by Tahsildar as per 2011 census<br><br>10. FSSAI Certificate issued in the applicant's name by the Competent Authorities.<br><br>11. GST Registration Certificate in the applicant's name issued by the competent authorities.<br><br>12. Installation Certificate of Fire Safety measures by the competent authorities.<br><br>13. Notarized Affidavit as per as per Rule 4-b of the Karnataka Excise (Sale of Indian and |

| | | |
|---|---|---|
| | | Inspection), Mysuru Division, Mysuru. |
| C | What is the number of CL-7 licences that can be held by an individual in his name as per State Excise Department guidelines; Whether there is a requirement to take a No objection Certificate from any other Department to hold more than one licence or for sanction of licence by the Department; If so, does the concerned Department not have the authority to question the basic income of a person for holding more than one CL-7 licence; (complete details to be furnished) | There are no restrictions in Karnataka Excise Act and State Excise Department guidelines barring an individual from holding more than one licence and to obtain No objection Certificate from any other Department.<br><br>Apart from disqualification criteria mentioned under Rule 4-B of the Karnataka Excise (Sale of Indian and Foreign Liquor) Rules, 1968, there are no other specific rules and directions for grant of licence to persons. |
| D | If so, there is an entry in the name of a person holding more than one CL-7 licence in Hassan District Excise Department's Memorandum No: JCM/11/Dooru/2023-24, dated:06-11-2023 and is this sanction in order; If so, has it come to the notice of the Government that it has been directed to examine this and submit a report within a time bound manner? (complete details to be furnished) | The Joint Commissioner of Excise (Enforcement and Inspection), Mysuru Division, Mysuru has constituted a Committee vide Memorandum No:JCM/11/Dooru/2023-24, dated:06-11-2023, to examine the said complaint application in detail. The Committee has verified the complaint application and submitted a report to the Joint Commissioner of Excise (Enforcement and Inspection), Mysuru Division, Mysuru, which is under examination in the office of the Joint Commissioner of Excise (Enforcement and Inspection), Mysuru Division, Mysuru. |

**FD 86 ELQ 2023**

(R.B THIMMAPUR)
EXCISE MINISTER

# ಅನುಬಂಧ

## ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಎಲ್-7 ಸನ್ನದುಗಳ ವಿವರ.

| ಕ್ರ.ಸಂ | ಸನ್ನದುದಾರರ ಹೆಸರು ಮತ್ತು ಸನ್ನದು ಇರುವ ಸ್ಥಳದ ವಿವರ |
|---|---|
| 1 | ಶ್ರೀ ಸಿಆರ್.ರಘು ಬಿನ್ ಸಿ.ವಿ. ರಾಜಪ್ಪ, ಸಿಎಲ್-7 ಸನ್ನದುದಾರರು, ತಿರುಮಲ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಖಾತಾ ನಂ:1151 ಬಿ.ಎಂ.ರಸ್ತೆ, ಚನ್ನರಾಯಪಟ್ಟಣ ಟೌನ್ |
| 2 | ಮೆ॥ ಅಕ್ಷತಾ ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಸಿಎಲ್-7 ಸನ್ನದುದಾರರು, ಶ್ರೀ ಕೆ.ಎಸ್.ಗಿರೀಶ್, ಖಾತಾ ನಂ:2111/1587 ಎಸ್.ಎ.ಎಸ್.ನಂ:434 ಗಾಯಿತ್ರಿ ಬಡಾವಣೆ ಚನ್ನರಾಯಪಟ್ಟಣ ಟೌನ್ |
| 3 | ಶ್ರೀ ಎನ್.ಲೀಲಾಕುಮಾರ್, ಸಿಎಲ್-7 ಸನ್ನದುದಾರರು, ಭೀಮಾ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಎಸ್.ಎ.ಎಸ್.ನಂ:45,50&90 ಬಿ.ಎಂ.ರಸ್ತೆ, ಚನ್ನರಾಯಪಟ್ಟಣ ಟೌನ್ |
| 4 | ಮೆ॥ಎಸ್.ಆರ್.ಎಸ್.ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಪಾಲುದಾರರು, ಸಿಎಲ್-7 ಸನ್ನದುದಾರರು, ಶ್ರೀ ಎಂ.ಶಂಕರ್ ಮತ್ತು ಎಲ್.ಎನ್. ಮಂಜುಳ, ನಯನ ನಿಲಯ, ಆರ್.ಎಂ.ಸಿ. ಹಿಂಭಾಗ, ಚನ್ನರಾಯಪಟ್ಟಣ ಎಆರ್ ನಂ:755 ಬಿ.ಎಂ.ರಸ್ತೆ ಚನ್ನರಾಯಪಟ್ಟಣ ಟೌನ್ |
| 5 | ಶ್ರೀಮತಿ ಸುಶೀಲಮ್ಮ ಕೋಂ ಜಿ.ಎಲ್. ಜಯಪಾಲ, ಸಿಎಲ್-7 ಸನ್ನದುದಾರರು, ಆದ್ಯಾಸ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಎಸ್.ಎ.ಎಸ್.ನಂ:664, ಎ.ಆರ್ ನಂ: 5885 ಬಿ.ಎಂ.ರಸ್ತೆ ಚನ್ನರಾಯಪಟ್ಟಣ ಟೌನ್ |
| 6 | ಶ್ರೀ ಹೆಚ್.ಆರ್.ಮಂಜುನಾಥ ಪ್ರಸಾದ್ ಹೆಚ್.ಜಿ. ರಾಧಕೃಷ್ಣ, ಆರ್.ಕೆ. ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಖಾತಾ ನಂ: 497 ಇ-ಸ್ವತ್ತು ನಂ: 151600503900901660, ಹಿರೀಸಾವೆ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು |
| 7 | ಶ್ರೀಮತಿ ಯಶೋಧಮ್ಮ ಕೋಂ ಮಹೇಂದ್ರಗೌಡ, ಶರಣ್ ರೆಸಿಡೆನ್ಸಿ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ನಂ: 38-3-171 ಎಸ್.ಎ.ಎಸ್ ನಂ:259/260, ಬಿ.ಎಂ.ರಸ್ತೆ, ಚನ್ನರಾಯಪಟ್ಟಣ ಟೌನ್ |
| 8 | ಶ್ರೀ ಎಂ.ಶಂಕರ್ ಬಿನ್ ಮಾಸ್ತಿಗೌಡ, ಸಿಎಲ್-7 ಸನ್ನದುದಾರರು, ಮೆ॥ಎಂ.ಎಸ್.ಟವರ್ .ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಖಾತಾ ನಂ 2113/1 ಎಸ್.ಎ.ಎಸ್ ನಂ 488 ವಾರ್ಡ್ ನಂ:12 ಬಿ.ಎಂ.ರಸ್ತೆ, ಚನ್ನರಾಯಪಟ್ಟಣ ಟೌನ್ |
| 9 | ಮೆ॥ ನ್ಯೂರಾಕ್ ರೆಸಿಡೆನ್ಸಿ, ಪಾಲುದಾರರು, ಸಿಎಲ್-7 ಸನ್ನದುದಾರರು, 1)ಎಂ.ಎನ್.ಸೋಮಶೇಖರ್ 2)ಶ್ರೀಮತಿ ಎನ್.ಎಸ್.ರಜಿನಿ, ನ್ಯೂ ರಾಕ್ ರೆಸಿಡೆನ್ಸ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಇ-ಸ್ವತ್ತಿನ ಸಂ: 151600503900920347, ಸ್ವತ್ತಿನ ನಂ:1834 ಹಿರೀಸಾವೆ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು |
| 10 | ಶ್ರೀ ಎ.ಆರ್.ಚಂದ್ರೇಗೌಡ ಬಿನ್ ರಾಮಕೃಷ್ಣೇಗೌಡ, ಸಿಎಲ್-7 ಸನ್ನದುದಾರರು, ಎಸ್.ಎಂ.ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಸ್ವತ್ತಿನ ಸಂ:151600503900921554, ಹಿರೀಸಾವೆ ಗ್ರಾಮ ಚನ್ನರಾಯಪಟ್ಟಣ ತಾಲ್ಲೂಕು |
| 11 | ಶ್ರೀ ಎಂ.ಕೆ.ದೇವರಾಜು, ಬ್ಲೂ ಲೈನ್ಸ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಇ-ಸ್ವತ್ತಿನ ಸಂ: 41-3-102 ಹಳೆ ಸ್ವತ್ತಿನ ನಂ:904/774 ಎಸ್.ಎ.ಎಸ್:10, ಬಿ.ಎಂ.ರಸ್ತೆ, ಚನ್ನರಾಯಪಟ್ಟಣ ಟೌನ್ |
| 12 | ಶ್ರೀಮತಿ ಎಲ್.ಎನ್.ಮಂಜುಳ ಕೋಂ ಎಂ.ಶಂಕರ್, ಸಿಎಲ್-7 ಸನ್ನದುದಾರರು, ಪ್ರಕೃತಿ .ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಸ್ವತ್ತಿನ ಸಂ:151600501300420076 ಖಾತಾ ನಂ:154, ಶ್ರವಣಬೆಳಗೊಳ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು |
| 13 | ಶ್ರೀ ಜೆ. ದೀಪಕ್‌ಗೌಡ, ಅತ್ತಿಹಳ್ಳಿ ರಸ್ತೆ, ಗೌಡಗೆರೆ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು, ಆದ್ಯಾ ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಸರ್ವೆ ಸಂ:113, ಹತ್ತಿಹಳ್ಳಿ ರಸ್ತೆ, ಗೌಡಗೆರೆ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು |
| 14 | ಶ್ರೀ ಜೆ. ದೀಪಕ್‌ಗೌಡ, ಅತ್ತಿಹಳ್ಳಿ ರಸ್ತೆ, ಗೌಡಗೆರೆ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು, ಆದ್ಯಾ ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಸರ್ವೆ ಸಂ:9/1, ಮೂಡನಹಳ್ಳಿ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು |

| | |
|---|---|
| 15 | ಶ್ರೀ ಬಿ.ಎಂ.ಭಗವಾನ್, ಸಿಎಲ್-7 ಸನ್ನದುದಾರರು, ಗಣೇಶ ಹೋಟೆಲ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಇ-ಸ್ವತ್ತು ನಂ:151600501800100193 ಉಪ್ಪಿನಹಳ್ಳಿ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು |
| 16 | ಶ್ರೀಮತಿ ಎಲ್.ಎಂ.ಸುಶೀಲಮ್ಮ, ಸಿಎಲ್-7 ಸನ್ನದುದಾರರು, ಆದ್ಯಾಸ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಇ-ಸ್ವತ್ತು ನಂ:151600501901020071, ಬಳದರೆಗೇಟ್ ಚನ್ನರಾಯಪಟ್ಟಣ ತಾಲ್ಲೂಕು |
| 17 | ಶ್ರೀ ಜೆ. ದೀಪಕ್‌ಗೌಡ, ಸಿಎಲ್-7 ಸನ್ನದುದಾರರು, ಆದ್ಯಾ ಕಂಪರ್ಟ್ಸ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ವಾರ್ಡ್ ನಂ:06, ಸ್ವತ್ತಿನ ಸಂ:43-505-106, ಮೈಸೂರು ರಸ್ತೆ, ಚನ್ನರಾಯಪಟ್ಟಣ ಟೌನ್. |
| 18 | ಶ್ರೀ ಎಸ್.ಕೆ. ಮಣೀಶ್‌ಎಸ್.ಪಿ.ಕೃಷ್ಣಪ್ಪ, ಸಿಎಲ್-7 ಸನ್ನದುದಾರರು, ವಿನಾಯಕ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂ:511, ಇ-ಸ್ವತ್ತಿನ ಸಂ:151600503200520526 ಶ್ರವಣಬೆಳಗೊಳ ಗ್ರಾಮ, ಚರಾಪ ತಾಲ್ಲೂಕು. |
| 19 | ಶ್ರೀ ಜೆ. ದೀಪಕ್‌ಗೌಡ, ಸಿಎಲ್-7 ಸನ್ನದುದಾರರು, ಆದ್ಯಾ ಕಂಪರ್ಟ್ಸ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂ:893, ಎಸ್.ಎ.ಎಸ್. ನಂ:198 ರಾಮೇಶ್ವರ ಬಡಾವಣೆ, ಹೊಸ ಬಸ್‌ಸ್ಟ್ಯಾಂಡ್ ಹತ್ತಿರ, ಬಿ.ಎಂ.ರಸ್ತೆ, ಚರಾಪ ಟೌನ್. |
| 20 | ಶ್ರೀ ಹೆಚ್.ಕೆ. ಹರೀಶ್ ಬಿನ್ ಕರಿಯಪ್ಪ, ಸಿಎಲ್-7 ಸನ್ನದುದಾರರು, ದೈವಿಕ ಕಂಪರ್ಟ್ಸ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂ:860/ಎ, ಇ-ಸ್ವತ್ತಿನ ಸಂ:151600503200520579, ಶ್ರವಣಬೆಳಗೊಳ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು. |
| 21 | ಶ್ರೀ ಸಿ.ಎಂ. ಅನಿಲ್‌ಕುಮಾರ್ ಬಿನ್ ಸಿ.ಜಿ.ಮಂಜಪ್ಪ, ಸಿಎಲ್-7 ಸನ್ನದುದಾರರು, ಸಿ.ಜಿ.ಎಂ.ಆರ್ ಬೋರ್ಡಿಂಗ್ ಲಾಡ್ಜಿಂಗ್ ಸ್ವತ್ತಿನ ಸಂ:35-2-147 ವಾರ್ಡ ನಂ:05, ಮೈಸೂರು ರಸ್ತೆ, ಚನ್ನರಾಯಪಟ್ಟಣ ಟೌನ್. |
| 22 | ಮೆ॥ ಶ್ರೀ ಲಕ್ಷ್ಮೀ ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಪಾಲುದಾರರು, ಶ್ರೀ ರತ್ನರಾಜು ಮಂಜುಳ ಎನ್.ಆರ್. ಶಿವಶಂಕರ, ಖಾತಾ ನಂ:254, ಇ-ಸ್ವತ್ತು ನಂ:151600500600920008, ನರೀಹಳ್ಳಿ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು |
| 23 | ಶ್ರೀ ಜೆ. ದೀಪಕ್‌ಗೌಡ, ಸಿಎಲ್-7 ಸನ್ನದುದಾರರು, ಆದ್ಯಾಸ್ ಕಂಪರ್ಟ್ಸ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂ:36-1-249, ಸ್ವತ್ತಿನ ಹಳೆ ಸಂ:12/3, ಎಸ್.ಎ.ಎಸ್ ನಂ:1310, ವಾರ್ಡ್ ನಂ:12, ಗೂರನಹಳ್ಳಿ ಬಡಾವಣೆ, ಬಾಗೂರು ರಸ್ತೆ, ಚನ್ನರಾಯಪಟ್ಟಣ ಟೌನ್. |
| 24 | ಶ್ರೀ ಜೆ. ದೀಪಕ್‌ಗೌಡ, ಸಿಎಲ್-7 ಸನ್ನದುದಾರರು, ಆದ್ಯಾಸ್ ಕಂಪರ್ಟ್ಸ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಇ-ಸ್ವತ್ತಿನ ಸಂ:151600 501901500100, ಸ್ವತ್ತಿನ ಸಂ:146, ಉದಯಪುರ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು. |
| 25 | ಶ್ರೀ ಯು.ಎಂ.ಶ್ರೀಧರ್ ಬಿನ್ ಮಂಚೇಗೌಡ, ಶ್ರೀ ಭೈರವೇಶ್ವರ ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಸಿಎಲ್-7 ಸನ್ನದುದಾರರು, ಸ್ವತ್ತಿನ ಸಂ:1-505-3, ಮಟನ್ ಮಾರ್ಕೆಟ್ ರಸ್ತೆ, ಚನ್ನರಾಯಪಟ್ಟಣ ಟೌನ್. |
| 26 | ಶ್ರೀ ಎಂ.ಶಂಕರ್ ಬಿನ್ ಮಾಸ್ತಿಗೌಡ, ಸಿಎಲ್-7 ಸನ್ನದುದಾರರು, ಪ್ರಕೃತಿ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂ:36-505-38, ವಾರ್ಡ್ ನಂ:13, ಬಾಗೂರು ರಸ್ತೆ, ಚನ್ನರಾಯಪಟ್ಟಣ ಟೌನ್ |
| 27 | ಶ್ರೀ ಯು.ಎನ್.ಚಂದ್ರು ಬಿನ್ ನಾಗಪ್ಪ, ಸಿಎಲ್-7 ಸನ್ನದುದಾರರು, ಜೆ.ಎನ್.ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂ:9-518-36, ಸ್ವತ್ತಿನ ಹಳೆ ಸಂಖ್ಯೆ:1972, ಎಸ್.ಎ.ಎಸ್ ನಂ:1174 ವಾರ್ಡ್ ನಂ:10, ಬಿ.ಎಂ.ರಸ್ತೆ, ಚನ್ನರಾಯಪಟ್ಟಣ ಟೌನ್ |
| 28 | ಶ್ರೀಮತಿ ಇಂದುಮತಿ ಕೋಂ ಎಂ.ಇ. ಚಂದ್ರೇಗೌಡ, ಸಿಎಲ್-7 ಸನ್ನದುದಾರರು, ಸ್ವಾತಿ ಇನ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಇ-ಸ್ವತ್ತಿನ ಸಂ:151 600501801220049, ಸ್ವತ್ತಿನ ಸಂಖ್ಯೆ:329, ದೊಡ್ಡಮತಿಘಟ್ಟ ಗ್ರಾಮ, ಚನ್ನರಾಯಪಟ್ಟಣ ತಾಲ್ಲೂಕು. |
| 29 | ಶ್ರೀಮತಿ ತಾಯಮ್ಮ ಕೋಂ ಲೇಟ್ ಸತ್ಯನಾರಾಯಣ, ಸಿಎಲ್-7 ಸನ್ನದುದಾರರು, ವೆಂಕಟಾದ್ರಿ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಇ-ಸ್ವತ್ತಿನ ಸಂ:151600500900520103, ಹಳೇ ಸ್ವತ್ತಿನ ಸಂಖ್ಯೆ:267, ದೇವಿಗೆರೆ ಗ್ರಾಮ, ಕಲ್ಕೆರೆ ಗ್ರಾಮಪಂಚಾಯ್ತಿ, ಕಸಬಾ ಹೋಬಳಿ ಚನ್ನರಾಯಪಟ್ಟಣ ತಾಲ್ಲೂಕು. |

| | |
|---|---|
| 30 | ಶ್ರೀ ಪರೀಕ್ಷಿತ್. ಎಸ್ ಬಿನ್ ಎಂ.ಶಂಕರ್, ಸಿಎಲ್-7 ಸನ್ನದುದಾರರು, ಇ-ಸ್ವತ್ತಿನ ಸಂ:1516005032 00520607, ಸ್ವತ್ತಿನ ಸಂಖ್ಯೆ:1631, ಶ್ರವಣಬೆಳಗೊಳ ಗ್ರಾಮ ಮತ್ತು ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು. |
| 31 | ಶ್ರೀಮತಿ ಎಲ್.ವಿ.ವೀಣಾ ಕೋಂ ಹೆಚ್.ಜಿ.ಮಂಜುನಾಥ್, ಹೆಚ್.ಎಂ.ಕೆ. ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಇ-ಸ್ವತ್ತಿನ ಸಂ:1516 00503900921746, ಗ್ರಾಮ ಪಂಚಾಯ್ತಿ ಆಸ್ತಿ ಸಂಖ್ಯೆ:245/1, ಬಿ.ಎಂ.ರಸ್ತೆ ಹಿರೀಸಾವೆ ಗ್ರಾಮ ಚನ್ನರಾಯಪಟ್ಟಣ ತಾಲ್ಲೂಕು |
| 32 | ಶ್ರೀ ಕೆ.ಆರ್. ಮಂಜೇಗೌಡ ಬಿನ್ ಕೆ.ಎಸ್.ರಂಗೇಗೌಡ, ಆರ್.ಆರ್.ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂ:44-507-65, ವಾರ್ಡ್ ನಂ:10, ಸ್ವತ್ತಿನ ಹಳೆ ಸಂಖ್ಯೆ:71/1ಎಬಿ, ಎಸ್.ಎ.ಎಸ್ ನಂ:1380, ನಾಗಸಮುದ್ರ ರಸ್ತೆ, ಚನ್ನರಾಯಪಟ್ಟಣ ಟೌನ್ |
| 33 | ಶ್ರೀ ಡಿ. ಕೃಷ್ಣಪ್ಪ ಬಿನ್ ದೊಡ್ಡೇಗೌಡ, ಶ್ರೀ ಸಾಯಿ ಇನ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಸ್ವತ್ತಿನ ಸಂ:15160 0500500120057, (ಗ್ರಾಮ ಪಂಚಾಯಿತಿ ದಾಖಲೆ ಸ್ವತ್ತಿನ ಸಂಖ್ಯೆ:227) ಯಾಚೇನಹಳ್ಳಿ ಗ್ರಾಮ, ಮೈಸೂರು ರಸ್ತೆ, ಚನ್ನರಾಯಪಟ್ಟಣ ತಾಲ್ಲೂಕು, |
| 34 | ಮೆ॥ ದಿ ಗ್ರಾಂಡ್ ಚಾಲುಕ್ಯ (ಬಾಲಾಜಿ ಅಸೋಸಿಯೇಷನ್) ಬೋರ್ಡಿಂಗ್ ಮತ್ತು ಲಾಡ್ಜಿಂಗ್, ಪಾಲುದಾರರು, ಸಿಎಲ್-7 ಸನ್ನದುದಾರರು, 1] ಡಿ.ಎಲ್ ಗಂಗಾಧರಯ್ಯ, 2] ಎನ್.ಪೂರ್ಣಿಮಾ, 3] ಹೆಚ್.ಕೆ. ಪುಷ್ಪಲತಾ ದಿ ಗ್ರಾಂಡ್ ಚಾಲುಕ್ಯ (ಬಾಲಾಜಿ ಅಸೋಸಿಯೇಷನ್) ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂ: 151600503900820040, ತೂಬಿನಕೆರೆ ಗ್ರಾಮ ಹಿರೀಸಾವೆ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, |
| 35 | ಶ್ರೀ ಎ.ಆರ್.ಚಂದ್ರೇಗೌಡ ಬಿನ್ ರಾಮಕೃಷ್ಣೇಗೌಡ, ಸಿಎಲ್-7 ಸನ್ನದುದಾರರು, ಎಸ್.ಎಂ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸಂ:151600503100620075, ಖಾತಾ ನಂ:265 ರ ಮಟ್ಟನವಿಲೆ ಗ್ರಾಮ, ಮಟ್ಟನವಿಲೆ ಗ್ರಾಮ ಪಂಚಾಯ್ತಿ, ಶ್ರವಣಬೆಳಗೊಳ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು |
| 36 | ಶ್ರೀಮತಿ ಗಗನ ಹೆಚ್.ಆರ್. ಸಿಎಲ್-7 ಸನ್ನದುದಾರರು, ಕೃಷಿ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸ್ವತ್ತಿನ ಸಂಖ್ಯೆ:151600503001220012, ಅರಕೆರೆ ಗ್ರಾಮ, ಹಿರೀಸಾವೆ ಹೋಬಳಿ ಚನ್ನರಾಯಪಟ್ಟಣ ತಾಲ್ಲೂಕು |
| 37 | ಹೆಚ್.ಜಿ. ಟ್ರೇಡರ್ಸ್, ಪಾಲುದಾರರು, ಶ್ರೀ.ಎನ್.ಹರೀಶ್ ಬಿನ್ ಶ್ರೀ.ಲೀಲಾ ಕುಮಾರ್, ಶ್ರೀ.ಪಿ.ಗಿರೀಶ್ ಬಿನ್ ಎನ್.ಪ್ರಭಾಕರ, ಶ್ರೀಮತಿ.ಕೃಪಾಶ್ರೀ ಕೋಂ ಶ್ರೀ.ಎನ್.ಹರೀಶ್ ಮತ್ತು ಶ್ರೀಮತಿ.ಎಸ್. ವಿಜಯಲಕ್ಷ್ಮೀ ಕೋಂ ಶ್ರೀ.ಪಿ.ಗಿರೀಶ್. ಇವರುಗಳಿಗೆ ಮೆ॥ ಜಲಧರ ಬೋರ್ಡಿಂಗ್ ಅಂಡ್ ಲಾಡ್ಜಿಂಗ್, ಸ್ವತ್ತಿನ ಸಂಖ್ಯೆ: 151600023001200082, ನೆಲಮಹಡಿ, ಬಿ.ಚೋಳೇನಹಳ್ಳಿ ಗ್ರಾಮ, ಶ್ರವಣಬೆಳಗೊಳ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು |

**ಆಇ 86 ಇಎಲ್‌ಕ್ಯೂ 2023**